ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮುಧೋಳ ಜಿ:ಬಾಗಲಕೋಟೆ

ಇ-ಮೇಲ್-beomudhol1@gmail.com ಫೋನ್ ನಂಬರ್:08350-280061

ಸಂಖ್ಯೆ:ಷ2(ಇ1)ಖಾಪ್ರಾಅನು:ರಹಿತ:ಮಾ:ನವೀ:ಎಸ್.ಸಿ.ತೆಗ್ಗಿನಮಠ:2018-19 | 402 ದಿನಾಂಕ: 27-7-2018

## ಜ್ಞಾಪನ

**ವಿಷಯ:** ಶಾಶ್ವತ ಅನುದಾನರಹಿತ **ಎಸ್.ಸಿ.ತೆಗ್ಗಿನಮಠ. ಜ್ಞಾನ ಗುರುಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಬೆಳಗಲಿ ತಾ:ಮುಧೋಳ** ಈ ಶಾಲೆಗೆ 1 ರಿಂದ 7 ನೇತರಗತಿ ಮಾನ್ಯತೆ ನವೀಕರಣ ನೀಡಿದ ಬಗ್ಗೆ.

**ಉಲ್ಲೇಖ:**
1) ಮಾನ್ಯ ಆಯುಕ್ತರು ಸಾ.ಶಿ.ಇ.ಬೆಂಗಳೂರು ಅವರ ಸುತ್ತೋಲೆ ಪತ್ರ ಸಂಖ್ಯೆ/ಸಿ8(8) /ಶಾಶುಅ/ಅಧಿಕವಿಭಾಗ/ 2001-02 ದಿ: 17-8-2002 ರ ಪ್ರಕಾರ.
2) ಸರ್ಕಾರದ ಆದೇಶ ಸಂಖ್ಯೆ/ಇಡಿ/46/ ಎಸ್ಇಪಿ/ 2006/ದಿ:12-4-2006.
3) ಸರ್ಕಾರದ ಸುತ್ತೋಲೆ ಇಡಿ/113/ವಿವಿಧ/2006 ದಿನಾಂಕ:2-11-2006.
4) ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಿ8(7)ಶಾಶಿಅ/ಮಾನ್ಯತೆ ನವೀಕರಣ/01/2015-16 ದಿ:19-08-2016.
5) **ಅಧ್ಯಕ್ಷರು, ಓಂ ಬಸವ ವಿದ್ಯಾ ಸಂಸ್ಥೆ(ರಿ) ಬೆಳಗಲಿ ತಾ:ಮುಧೋಳ** ತಾ:ಮುಧೋಳ ಇವರ ಮನವಿ ಪತ್ರ ದಿ:12-03-2018.
6) **ಶ್ರೀ.ಎಸ್.ಎಸ್.ಹಂಚನಾಳ. ಶಿಕ್ಷಣ ಸಂಯೋಜಕರು ಮಹಾಲಿಂಗಪೂರ ವಲಯ ಇವರ ಸ್ಥಳ ಪರಿಶೀಲನಾ ವರದಿ ದಿ:25-09-2018 ರಂದು** ನೀಡಿದ ಮೂಲಭೂತ ಸೌಲಭ್ಯಗಳ ಸ್ಥಳ ಪರಿಶೀಲನಾ ವರಧಿಯಲ್ಲಿ ಅಂಕಗಳು-79

*****

ಮೇಲಿನ ಉಲ್ಲೇಖಿತ (5)ರ ಪತ್ರದಲ್ಲಿ **ಅಧ್ಯಕ್ಷರು, ಓಂ ಬಸವ ವಿದ್ಯಾ ಸಂಸ್ಥೆ(ರಿ) ಬೆಳಗಲಿ ತಾ:ಮುಧೋಳ ಈ ಸಂಸ್ಥೆಯಲ್ಲಿ ನಡೆಯುತ್ತಿರುವ ಎಸ್.ಸಿ.ತೆಗ್ಗಿನಮಠ. ಜ್ಞಾನ ಗುರುಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಬೆಳಗಲಿ ತಾ:ಮುಧೋಳ** ಈ ಶಾಲೆಗೆ **2018-19ನೇ ಸಾಲಿನಿಂದ ರಿಂದ 2022-23ನೇ** ಸಾಲಿನವರಗೆ ಮಾನ್ಯತೆ ನವೀಕರಣ ನೀಡುವ ಸಲುವಾಗಿ ಪ್ರಸ್ತಾವಣೆಯನ್ನು ಸಲ್ಲಿಸಿದ್ದು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಉಲ್ಲೇಖ(3)(4)ರ ಸರ್ಕಾರಿ ಆದೇಶದಲ್ಲಿನ ಕಂಡಿಕೆ-4ರಲ್ಲಿ ತಿಳಿಸಿದಂತೆ 5 ವರ್ಷಗಳಿಗೆ ಮಾತ್ರ ಮಾನ್ಯತೆ ನವೀಕರಣ ನೀಡಲು ಅವಕಾಶವಿದ್ದು. ಈ ಸಂಬಂಧ ಉಲ್ಲೇಖ(5)ರಲ್ಲಿ **ಶಿಕ್ಷಣ ಸಂಯೋಜಕರು ಮಹಾಲಿಂಗಪೂರ ವಲಯ ಇವರ** ಅಭಿಪ್ರಾಯವನ್ನು ಪರಿಗಣಿಸಿ **ಶಾಶ್ವತ ಅನುದಾನ ರಹಿತ ಎಸ್.ಸಿ.ತೆಗ್ಗಿನಮಠ. ಜ್ಞಾನ ಗುರುಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಬೆಳಗಲಿ** ಈ ಪ್ರಾಥಮಿಕ ಶಾಲೆಗೆ ಈ ಕೆಳಗೆ ಕಾಣಿಸಿದ ವಿಭಾಗಗಳಿಗೆ ಈ ಕೆಳಗೆ ವಿಧಿಸಿದ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಶಿಕ್ಷಣ ಮಸೂದೆ 1983 ರ ನಿಯಮಗಳನ್ವಯ ತಾತ್ಕಾಲಿಕವಾಗಿ ಮಾನ್ಯತೆ **2018-19ನೇ ಸಾಲಿನಿಂದ ರಿಂದ 2022-23ನೇ** ಸಾಲಿನವರಗೆ ನವೀಕರಿಸಿದೆ.

**ಸಕಾಲ ಯೋಜನೆಯ ಸಂ:** ED099-00004-46958 & 28/09/2018 2:52:00 PM

| ತರಗತಿ | ಅನುದಾನ ರಹಿತವಾಗಿ ಅನುಮೋದಿಸಲ್ಪಟ್ಟ ವಿಭಾಗಗಳು | | | | | ಷರಾ |
|---|---|---|---|---|---|---|
| | ಕನ್ನಡ | ಮರಾಠಿ | ಉರ್ದು | ಆಂಗ್ಲ | ಒಟ್ಟು | ಶಾಶ್ವತ ಅನುದಾನ ರಹಿತ ಆಂಗ್ಲ ಮಾಧ್ಯಮದ 07ವಿಭಾಗಗಳಿಗೆ ತಾತ್ಕಾಲಿಕವಾಗಿ 2018-19ನೇ ಸಾಲಿನಿಂದ 2022-23ನೇ ಸಾಲಿನ ವರೆಗೆ ಮಾನ್ಯತೆ ನವೀಕರಿಸಿದೆ. |
| 1ನೇ | - | - | - | 1 | 1 | |
| 2ನೇ | - | - | - | 1 | 1 | |
| 3ನೇ | - | - | - | 1 | 1 | |
| 4ನೇ | - | - | - | 1 | 1 | |
| 5ನೇ | - | - | - | 1 | 1 | |
| 6ನೇ | - | - | - | 1 | 1 | |
| 7ನೇ | - | - | - | 1 | 1 | |
| 8ನೇ | - | - | - | - | - | |
| ಒಟ್ಟು | - | - | - | 7 | 7 | |

**ಷರತ್ತುಗಳು**

1. ಕರ್ನಾಟಕ ಶಿಕ್ಷಣ ಕಾಯ್ದೆ 36 ರಿಂದ 39 ರಂತೆ ಎಲ್ಲಾ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು 01-06 1995 ರಿಂದ ಮಾನ್ಯತೆಯನ್ನು ಪಡೆಯಬೇಕಾಗುತ್ತದೆ.
2. ಕರ್ನಾಟಕ ಏಜ್ಯುಕೇಶನ್ ಇನ್‌ಸ್ಟಿಟ್ಯೂಶನ್ (ರಿಕಗ್ನೈಜೆಶನ್ ಆಫ್ ಪ್ರಾಯಮರಿ & ಸೆಕಂಡರಿ ಸ್ಕೂಲ್ಸ್) ರೂಲ್ಸ 1999 ರ ದಿನಾಂಕ 04-11-1999 ರ ಮಾನ್ಯತೆ ನಿಯಮ 4 ರಲ್ಲಿ ನಿಗಧಿಪಡಿಸಿರುವ ಈ ಕೆಳಗಿನ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹಾಗೂ ಷರತ್ತುಗಳನ್ನು ಪೂರೈಸಿರಬೇಕು.
   1) ಕರ್ನಾಟಕ ಏಜ್ಯುಕೇಶನಲ್ ಇನ್‌ಸ್ಟಿಟ್ಯೂಶನ್ (ಕ್ಲಾಸಿಫೀಕೇಶನ್, ರಜಿಸ್ಟೇಶನ್ & ಪ್ರಿಸ್ಕ್ರಿಪಶನ್ ಶರುಕ್ಯೂಲಾ ಇತ್ಯಾದಿ) ನಿಯಮಗಳು 1995 ರಲ್ಲಿನ ಮತ್ತು ತದನಂತರ ಬಂದ ಎಲ್ಲ ನಿಯಮ ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.
   2) 1995 ರ ನಿಯಮ 4,5,6 ಮತ್ತು 8 ರಲ್ಲಿ ವಿವರಿಸಿದಂತೆ ಉತ್ತಮವಾದ ಕಟ್ಟಡ ಸೌಲಭ್ಯ, ತೃಪ್ತಿಕರವಾದ ಸುತ್ತಮುತ್ತಲಿನ ಪರಿಸರ, ಕುಡಿಯುವ ನೀರು, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಹಾಗೂ ಇನ್ನಿತರ ಸೌಲಭ್ಯಗಳನ್ನು ತೃಪ್ತಿಕರವಾಗಿ ಒದಗಿಸಿತರತಕ್ಕದ್ದು.

3) ಗ್ರಂಥಾಲಯ ಪುಸ್ತಕಗಳು, ವಿಜ್ಞಾನ ಉಪಕರಣಗಳು, ಕ್ರೀಡಾ ಸಾಮಗ್ರಿಗಳು, ನಕ್ಷೆ, ಚಾರ್ಟ ಮತ್ತು ಇತರೆ ಎಲ್ಲ ಪಾಠೋಪಕರಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರತಕ್ಕದ್ದು.
4) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿರುವ ಪ್ರಕಾರ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
5) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಲಾಸಿಫೀಕೇಶನ್ ಮತ್ತು ರಜಿಸ್ಟೇಶನ್) ನಿಯಮ 1997 ರನ್ವಯ ನಿಯಮ 4 ರಂತೆ ಆರ್ಥಿಕವಾಗಿ ಸುಭದ್ರವಾಗಿರತಕ್ಕದ್ದು. ಹಾಗೂ ಅಗತ್ಯ ಇರುವ ದಾಖಲೆಗಳನ್ನು ಒದಗಿಸಿರತಕ್ಕದ್ದು.
6) 1995 ರ ನಿಯಮ 18,19,20 ರಂತೆ ಪಠ್ಯಪುಸ್ತಕ, ಬೋದನಾ ಮಾಧ್ಯಮ, ಪರೀಕ್ಷಾ ಕ್ರಮ, ಕೆಲಸದ ದಿನಗಳು, ಕೆಲಸದ ಅವಧಿಗಳು, ಮನೆಗೆಲಸದ ವಿವರಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7) ಶಾಲೆಯ ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
8) ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿ ಮತ್ತು ಅದೇ ಹೆಸರಿನಲ್ಲಿ ಹೆಸರಿನಲ್ಲಿ ನಡೆಸತಕ್ಕದ್ದು. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರದಲ್ಲಿ ನಡೆಸತಕ್ಕದ್ದು. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.
9) ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ದಾಖಲೆ ಮತ್ತು ರಜಿಸ್ಟರಗಳನ್ನು ನಿರ್ವಹಿಸತಕ್ಕದ್ದು.
10) ಕಿರಿಯ ಪ್ರಾಥಮಿಕ ಶಾಲೆಯಲ್ಲಿ 40, ಹಿರಿಯ ಪ್ರಾಥಮಿಕ ಶಾಲೆಯಲ್ಲಿ 100 ಹಾಗೂ ಪ್ರೌಢ ಶಾಲೆಗಳಲ್ಲಿ ಕನಿಷ್ಠ 25 ಮಕ್ಕಳ ಸಂಖ್ಯೆಯನ್ನು ತರಗತಿವಾರು ಹೊಂದಿರತಕ್ಕದ್ದು.
11) ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಮತ್ತು ಇಲಾಖಾ ಕಾರ್ಯಗಳಲ್ಲಿ ಲಭ್ಯವಾಗಿರತಕ್ಕದ್ದು.
12) ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮ, ಹಾಗೂ ಬೋಧನಾ ಕ್ರಮದಲ್ಲಿ ಬೋಧನೆಯನ್ನು ಮಾಡತಕ್ಕದ್ದು.
13) ಸರ್ಕಾರ ಮತ್ತು ಇಲಾಖೆಯ ಕಾಲ ಕಾಲಕ್ಕೆ ಹೊರಡಿಸುವ ಎಲ್ಲ ಆದೇಶ ಮತ್ತು ಸುತ್ತೋಲೆಗಳನ್ನು ಪಾಲಿಸುವುದು.
14) ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
15) ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
16) ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
17) ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.
18) ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವದು
19) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ಹಾಗೂ ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ: 12-01-2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಠ ವೇತನ [ಸಹ ಶಿಕ್ಷಕರಿಗೆ 25800/-, "ಡಿ" ದರ್ಜೆ ನೌಕರರ- ರೂ. 17000- ] ವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು. ಸೇವಾ ಸೌಲಭ್ಯ ನೀಡುತ್ತಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ತಿಂಗಳು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು. (ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಅನ್ವಯಿಸುವುದಿಲ್ಲ)
20) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 7-9-98 ಮತ್ತು ದಿನಾಂಕ: 29-12-98 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. **(ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಅನ್ವಯಿಸುವುದಿಲ್ಲ)**
21) ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.
22) ಆಡಳಿತ ಮಂಡಳಿಯು ರೂ. 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಹೊಂದಿರತಕ್ಕದ್ದು.
23) ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.
24) ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
25) ಶಾಲಾ ವಾಹನ ನಿರ್ವಹಿಸಿದ್ದಲ್ಲಿ ವಾಹನ ಕಾಯ್ದೆಯನ್ವಯ ನಿಗಧಿತ ನಮೂನೆಯಲ್ಲಿ ಮಾಹಿತಿಗಳನ್ನು ನಿರ್ವಹಿಸಿರತಕ್ಕದ್ದು.
26) ಮಾನ್ಯತೆ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ಮಾನ್ಯತೆ ರದ್ದುಪಡಿಸಲಾಗುವುದು.
27) ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 39 (1) (ಎ) ರ ಪ್ರಕಾರ ಮಾನ್ಯತೆ ಪಡೆದ ಯಾವುದೇ ಶೈಕ್ಷಣಿಕ ಸಂಸ್ಥೆಯು ಮಾನ್ಯತೆಗಾಗಿ ನಿಗದಿಪಡಿಸಿದ ಎಲ್ಲ ಅಥವಾ ಯಾವುದೇ ಕರಾರನ್ನು ಪೂರೈಸದೇ ಹೋದರೆ ಆ ಶಾಲೆಗೆ ನೀಡಿದ ಮಾನ್ಯತೆಯನ್ನು ರದ್ದುಪಡಿಸುವ ಕುರಿತು ಕಛೇರಿಯು ಕ್ರಮ ಕೈಕೊಳ್ಳುತ್ತದೆ.

**ಕ್ಷೇತ್ರ ಶಿಕ್ಷಣಾಧಿಕಾರಿಗಳು**
**ಮುಧೋಳ.ಜಿ:ಬಾಗಲಕೋಟ**

ಗೆ,
**ಅಧ್ಯಕ್ಷರು, ಓಂ ಬಸವ ವಿದ್ಯಾ ಸಂಸ್ಥೆ(ರಿ) ಬೆಳಗಲಿ ತಾ:ಮುಧೋಳ ಮುಧೋಳ.ಜಿ:ಬಾಗಲಕೋಟ**